ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 560 001

ಸಂಖ್ಯೆ: ಸಿ5(7)ವಾ.ಬ.ಹ/16/2016-17 ದಿನಾಂಕ:24/04/2017

**: ಬಹಿರಂಗ ಹರಾಜು ಪ್ರಕಟಣೆ :**

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು 560 001, ಇಲ್ಲಿನ ಐದು (05) ವಾಹನಗಳನ್ನು **ದಿನಾಂಕ:20/05/2017ರಂದು** ಸಂಜೆ 4.00 ಘಂಟೆಗೆ ಬಹಿರಂಗ ಹರಾಜಿನಲ್ಲಿ ವಿಲೇ ಮಾಡಲು ಉದ್ದೇಶಿಸಿದ್ದು, ಆಸಕ್ತ ಖರೀದಿದಾರರು ಹರಾಜಿನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

| ಕ್ರ ಸಂ | ವಾಹನದ ಸಂಖ್ಯೆ ಹಾಗೂ ಮಾದರಿ | ಪ್ರಾದೇಶಿಕ ಸಾರಿಗೆ ಕಛೇರಿಯಿಂದ ನಿಗದಿಪಡಿಸಲಾದ ದರ | ಇ.ಎಂ.ಡಿ ಮೊತ್ತ (ಬ್ಯಾಂಕ್ ಹುಂಡಿ ಮೂಲಕ) |
|---|---|---|---|
| 1 | 1995ರ ಮಾದರಿಯ ಅಂಬಾಸಿಡರ್ ಕಾರು ಕೆಎ-01-ಜಿ-1788 (ಪೆಟ್ರೋಲ್) | ರೂ.35,000/- | ರೂ.3,500/- |
| 2 | 2000ರ ಮಾದರಿಯ ಮಾರುತಿ ಆಮ್ನಿ ವ್ಯಾನ್ ಕೆಎ-01-ಜಿ-3533 (ಪೆಟ್ರೋಲ್) | ರೂ.35,000/- | ರೂ.3,500/- |
| 3 | 1998ರ ಮಾದರಿಯ ಟಾಟಾ ಸುಮೋ ಕೆಎ-01-ಜಿ-3092 (ಡೀಸಲ್) | ರೂ.35,000/- | ರೂ.3,500/- |
| 4 | 1997ರ ಮಾದರಿಯ ಟಾಟಾ ಸುಮೋ ಕೆಎ-01-ಜಿ-2960 (ಡೀಸಲ್) | ರೂ.50,000/- | ರೂ.5,000/- |
| 5 | 2005ರ ಮಾದರಿಯ ಮಾರುತಿ ಎಸ್ಟೀಮ್ ಕಾರು ಕೆಎ-01-ಜಿ-4274 (ಪೆಟ್ರೋಲ್) | ರೂ.50,000/- | ರೂ.5,000/- |

ನಿಬಂಧನೆಗಳು :

1. "ಎಲ್ಲಿ ಹೇಗಿದೆಯೋ ಹಾಗೆ" (As is where is condition) ಸ್ಥಿತಿಯಲ್ಲಿ ವಿಲೇವಾರಿ ಮಾಡಲಾಗುವುದು.
2. ಹರಾಜು ಮಾಡಲಾಗುವ ವಾಹನಗಳನ್ನು **"ಶಿಕ್ಷಕರ ಸದನ, ಕೆಂಪೆಗೌಡ ರಸ್ತೆ, ಬೆಂಗಳೂರು 560 001,** ಇಲ್ಲಿನ ನೆಲಮಾಹಡಿಯಲ್ಲಿ ನಿಲ್ಲಿಸಲಾಗಿದ್ದು, ಆಸಕ್ತ ಖರೀದಿದಾರರು ಖುದ್ದಾಗಿ ವೀಕ್ಷಿಸಲು ಅವಕಾಶವಿರುತ್ತದೆ.
3. ಹರಾಜಿನಲ್ಲಿ ಭಾಗವಹಿಸುವ ಆಸಕ್ತ ಖರೀದಿದಾರರು ಮರುಹೊಂದಿಸಲಾಗುವ ಠೇವಣಿ ಹಣವನ್ನು ಹರಾಜಿನ ದಿನಾಂಕದ **ಮೂರು ದಿನ ಮುಂಚಿತವಾಗಿ ಈ ಕಛೇರಿಗೆ ಬ್ಯಾಂಕ್ ಹುಂಡಿಗಳ (ಡಿಡಿ) ಮೂಲಕ** ಜಮಾ ಮಾಡುವುದು ಹಾಗೂ ಫೋಟೋ ಗುರುತಿನ ಚೀಟಿಯ ನಕಲು ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು. ಯಾವುದೇ ಕಾರಣಕ್ಕೂ ನಗದು ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
4. ಹರಾಜಿನಲ್ಲಿ ಯಶಸ್ವಿಯಾಗುವ ಖರೀದಿದಾರರು ಹರಾಜು ಮೊತ್ತದ ಉಳಿಕೆ ಬಾಬ್ತನ್ನು ಹರಾಜಿನ ನಂತರದ ಮೂರು ಕೆಲಸದ ದಿನಗಳ ಒಳಗೆ ಪಾವತಿ ಮಾಡಬೇಕಿರುತ್ತದೆ. ಹಣವನ್ನು "Commissioner for Public Instructions, Bengaluru" ಇವರ ಹೆಸರಿಗೆ ಬ್ಯಾಂಕ್ ಹುಂಡಿ ಮೂಲಕ ಪಾವತಿಸುವುದು.

5. ಹರಾಜಿನಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಯಿಂದ ನಿಗದಿಪಡಿಸಲಾದ ದರಕ್ಕಿಂತ ಹೆಚ್ಚಿನ ದರವನ್ನು ಸೂಚಿಸುವ ಖರೀದಿದಾರರಿಗೆ ಸಂಬಂಧಿಸಿದ ವಾಹನಗಳನ್ನು ವಿಲೇವಾರಿ ಮಾಡಲಾಗುವುದು.
6. ಹರಾಜಿನಲ್ಲಿ ಯಶಸ್ವಿಯಾಗುವ ಖರೀದಿದಾರರು ಸಂಬಂಧಿಸಿದ ವಾಹನದ ಮೊತ್ತದ ಮೇಲಿನ ವ್ಯಾಟ್ ತೆರಿಗೆಯನ್ನು ನಿಯಮಾನುಸಾರ "Assistant Commissioner, Commercial Tax, Local VAT Office-20", ಇವರ ಹೆಸರಿಗೆ ಬ್ಯಾಂಕ್ ಹುಂಡಿ ಪಡೆದು **3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು 560 001,** ಇಲ್ಲಿನ ಸಹಾಯಕ ಆಯುಕ್ತರ ಕಛೇರಿಗೆ ಪಾವತಿಸಿ, ವಾಹನವನ್ನು ಸುಪರ್ಧಿಗೆ ಪಡೆಯುವ ಸಮಯದಲ್ಲಿ ಪಾವತಿಯ ದಾಖಲೆಯನ್ನು ಸಲ್ಲಿಸುವುದು.
7. ಒಂದು ಪಕ್ಷ ನಿಗದಿತ ದಿನಾಂಕದಂದು ಅನಿವಾರ್ಯ ಕಾರಣಗಳಿಂದ ಹರಾಜು ಪ್ರಕ್ರಿಯೆ ಮಾಡಲು ಆಗದಿದ್ದಲ್ಲಿ ಮುಂದಿನ ಕಾರ್ಯ ನಿರ್ವಹಣಾ ದಿನ ಸಾಯಂಕಾಲ 4-00 ಘಂಟೆಗೆ ಹರಾಜು ಮಾಡಲಾಗುವುದು.
8. ಹರಾಜನ್ನು ಮುಂದೂಡುವ, ರದ್ದು ಮಾಡುವ ಅಥವಾ ನಿಬಂಧನೆಯನ್ನು ಮಾರ್ಪಡಿಸುವ ಅಧಿಕಾರ ಮಾನ್ಯ ಆಯುಕ್ತರು ಹೊಂದಿರುತ್ತಾರೆ.
9. ಯಾವುದೇ ಖರೀದಿದಾರರು ಸೂಚಿಸುವ ದರವನ್ನು ಒಪ್ಪುವ ಅಥವಾ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಮಾನ್ಯ ಆಯುಕ್ತರು ಹೊಂದಿರುತ್ತಾರೆ. ಈ ಬಗ್ಗೆ ಯಾವುದೇ ತಕರಾರುಗಳಿಗೆ ಅವಕಾಶವಿರುವುದಿಲ್ಲ.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

(ಎಸ್.ಕಾತ್ಯಾಯನಿ ದೇವಿ)
ಜಂಟಿ ನಿರ್ದೇಶಕರು (ಆಡಳಿತ)